**ದಿನಾಂಕ 21-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಎಸ್ ಎನ್ ವಕೀಲರಿಂದಃ**

1 ರಿಂದ 6 ನೇ ಪ್ರತಿವಾದಿಯರು ಖರೀದಿ ಮಾಡಿದ ಆಸ್ತಿಯಲ್ಲಿ ಸ್ವಾಧೀನ ಮತ್ತು ಅನುಭವವನ್ನು ಮಾಡಿಕೊಂಡು ಇರುತ್ತಾರೆ ಎಂದರೆ ಸ್ವಾಧೀನವು ನಮ್ಮ ಬಳಿ ಇದೆ . 1 ನೇ ಪ್ರತಿವಾದಿಯವರು ಅವರು ಖರೀದಿ ಮಾಡಿದ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆ ಹಾಗೂ ಬಾವಿಯನ್ನು ಮಾಡಿರುತ್ತಾರೆ ಎಂದರೆ ಅದು ಬೇರೆ ಜಾಗ. 1 ನೇ ಪ್ರತಿವಾದಿಯವರು ಕಟ್ಟಿರುವ ಮನೆಯು ಹಾಗೂ ಬಾವಿಯು ಬೇರೆ ಜಾಗವಾಗಿದಲ್ಲಿ ಅವರನ್ನು ಯಾವ ಕಾರಣದಿಂದ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ನಾವು ಮಾಡಿರುವುದಿಲ್ಲ ಅವರೇ ಬಂದಿರುವುದು . ನಿಮ್ಮ ಅಕ್ಕನವರ ಜಿಪಿಎದಾರರಾದ ಕೆ ರಾಮಚಂದ್ರ ನಾಯಕ್ ರವರು 1 ನೇ ಪ್ರತಿವಾದಿಯವರನ್ನು ಪಕ್ಷಗಾರರನ್ನಾಗಿ ಮಾಡಿದ ಕಾರಣದಿಂದ ಅವರು ದಾವೆಯಲ್ಲಿ ಹಾಜರಾಗಿದ್ದಾರೆ ಎಂದರೆ ಹೌದು . ವಾದಿಯವರು ಯು.ಎಸ್ .ಎ ನಲ್ಲಿ ವಾಸವಾಗಿದ್ದಾರೆ ಎಂದರೆ ಹೌದು. ವಾದಿಯವರು ಕೆ ರಾಮಚಂದ್ರ ನಾಯಕ್ ರವರಿಗೆ ನೀಡಿದ್ದಾರೆ ಎಂದು ಹೇಳುವ ಜಿಪಿಎ ನ್ನು ನೀವು ನೋಡಿರುತ್ತೀರಾ ಎಂದರೆ ಹೌದು . ನೀವು ಯಾವಾಗ ಜಿಪಿಎನ್ನು ನೋಡಿರುತೀರಿ ಎಂದರೆ ಜಿಪಿಎ ನ್ನು ಕೊಡುವಾಗ ನೋಡಿರುತ್ತೇನೆ. ಸದರಿ ಜಿಪಿಎ ಯಾರ ಮುಂದೆ ಅಟೆಸ್ಟ್ ಆಗಿರುತ್ತದೆ ಎಂದರೆ ಕೃಷ್ಣಭಟ್ ರವರ ಮಗ ಎಸ್.ಎಸ್ ಪ್ರಸಾದ್ ರವರ ಮುಂದೆ ಅಟೆಸ್ಟ್ ಆಗಿರುತ್ತದೆ . ಅದು ಯಾವಾಗ ಅಟೆಸ್ಟ್ ಆಗಿರುವುದು ಎಂದರೆ ಸುಮಾರು 10 ವರ್ಷಗಳ ಹಿಂದೆ ಆಗಿರುತ್ತದೆ . ಜಿಪಿಎ ನ್ನು ಎಷ್ಟು ಜಮೀನಿಗೆ ಸಂಬಂಧಿಸಿದಂತೆ ನೀಡಿರುತ್ತಾರೆ ಎಂದರೆ 1 ಎಕ್ರೆ 35 ಸೆಂಟ್ಸ್ ಭೂಮಿಗೆ ಸಂಬಂಧಿಸಿದಂತೆ ನೀಡಿರುತ್ತಾರೆ . ವಾದಿಯವರು ನಿಮಗೆ ವ್ಯವಸ್ಥಾ ಪತ್ರವನ್ನು ಯಾವಾಗ ಮಾಡಿಕೊಟ್ಟಿರುತ್ತಾರೆ ಎಂದರೆ 2006 ಅಥವಾ 2007 ರಲ್ಲಿ ಮಾಡಿಕೊಟ್ಟಿರುತಾರೆ . ವ್ಯವಸ್ಥಾ ಪತ್ರವನ್ನು ಎಷ್ಟು ಭೂಮಿಗೆ ಸಂಬಂಧಿಸಿದಂತೆ

ಮಾಡಿಕೊಟ್ಟಿರುತ್ತಾರೆ ಎಂದರೆ 2 ಎಕ್ರೆಗೆ ಮಾಡಿಕೊಟ್ಟಿರುತ್ತಾರೆ . ನಿಮಗೆ ವ್ಯವಸ್ಥಾ ಪತ್ರವನ್ನು ಮಾಡಿಕೊಡುವ ಸಮಯದಲ್ಲಿ ಆ ಭೂಮಿಯು ಪರಿವರ್ತನೆಯಾಗಿತ್ತೆ ಎಂದರೆ ಇಲ್ಲ . ವ್ಯವಸ್ಥಾಪತ್ರವನ್ನು ಮಾಡಿಕೊಡುವ ಸಮಯದಲ್ಲಿ ಆ ಭೂಮಿಯ ಸರ್ವೆ ನಕ್ಷೆ ಮಾಡಿಸಲಾಗಿತ್ತೆ ಎಂದರೆ ಹೌದು . ಸರ್ವೆ ನಕ್ಷೆ ತಯಾರಿಸಲು ಯಾರು ಅರ್ಜಿ ಯನ್ನು ಸಲ್ಲಿಸಿರುವುದು ಎಂದರೆ ನಾನೇ ನೀಡಿರುತ್ತೇನೆ . ವಾದಿಯವರು ಭೂಮಿ ಯ ಮಾಲೀಕರು ಆಗಿದ್ದ ಕಾರಣ ನಿಮಗೆ ಸರ್ವೇನಕ್ಷೆಯನ್ನು ತಯಾರಿಸಲು ಅರ್ಜಿಯನ್ನು ಸಲ್ಲಿಸುವ ಅಧಿಕಾರ ಇರಲಿಲ್ಲ ಎಂದರೆ ಅವರ ಪರವಾಗಿ ನಾನು ನೀಡಿರುತ್ತೇನೆ . ವಾದಿಯವರು ಅವರ ಪರವಾಗಿ ಅರ್ಜಿಯನ್ನು ಸಲ್ಲಿಸಲು ನಿಮಗೆ ಅಧಿಕಾರ ಪತ್ರವನ್ನು ಕೊಟ್ಟಿದ್ದಾರೆಯೇ ಎಂದರೆ  ಕೊಟ್ಟಿರಬಹುದು. ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೇ ಎಂದರೆ ಮನೆಯಲ್ಲಿ ಹುಡುಕಾಟ ಮಾಡಬೇಕು .  ನಿಮಗೆ ವ್ಯವಸ್ಥಾಪತ್ರವನ್ನು  ಮಾಡಿಕೊಟ್ಟಿದಾರೆ ಎಂದು ಹೇಳುವ ಭೂಮಿಯು ವಾದಿಯವರಿಗೆ ಸೇರಿದ ಭೂಮಿಯ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಪೂರ್ವ ದಕ್ಷಿಣ ದಿಕ್ಕಿಗೆ ಬರುತ್ತದೆ. ನಿಮಗೆ ವ್ಯವಸ್ಥಾಪತ್ರದ ಮೂಲಕ ನೀಡಿದ್ದಾರೆ ಎಂದು ಹೇಳುವ ಭೂಮಿಯ ಪೂರ್ವ ದಿಕ್ಕಿಗೆ ಯಾವ ಸರ್ವೆ ನಂಬರ್ ನ ಜಮೀನು ಬರುತ್ತದೆ ಎಂದರೆ  ಸರ್ವೇ ನಂ ಗೊತ್ತಿಲ್ಲ ಆದರೇ ತೋಡು ಬರುತ್ತದೆ .

ನಿಮಗೆ ವ್ಯವಸ್ಥಾಪತ್ರದ ಮೂಲಕ ನೀಡಿದ್ದಾರೆ ಎಂದು ಹೇಳುವ ಭೂಮಿಯ ದಕ್ಷಿಣ  ದಿಕ್ಕಿಗೆ ಯಾರ ಜಮೀನು ಬರುತ್ತದೆ ಎಂದರೆ  ನನ್ನ ಚಿಕ್ಕಮ್ಮ ಕೃಷ್ಣಮ್ಮ ಶೆಟ್ಟಿ ಹಾಗೂ ದಯಾನಂದ ಭಂಡಾರಿ ರವರ ಜಮೀನು ಬರುತ್ತದೆ . ಅದರ ಸರ್ವೆ ನಂಬರ್ ಎಷ್ಟು ಎಂದರೆ ಸರ್ವೆ ನಂ 177/3 ಆಗಿದ್ದು ಅದು ವಿವಾದಿತ ಭೂಮಿಯ ಭಾಗವಾಗಿರುತ್ತದೆ .    ನಿಮಗೆ ವ್ಯವಸ್ಥಾಪತ್ರದ ಮೂಲಕ ನೀಡಿದ್ದಾರೆ ಎಂದು ಹೇಳುವ ಭೂಮಿಯ ಪಶ್ಚಿಮ   ದಿಕ್ಕಿಗೆ ಯಾರ  ಜಮೀನು ಬರುತ್ತದೆ ಎಂದರೆ ನನ್ನ ಅಕ್ಕ ಅಂದರೆ ವಾದಿಯವರಿಗೆ ಸೇರಿದ ಜಮೀನು ಇರುತ್ತದೆ. ನಿಮಗೆ ವ್ಯವಸ್ಥಾಪತ್ರದ ಮೂಲಕ ನೀಡಿದ್ದಾರೆ ಎಂದು ಹೇಳುವ ಭೂಮಿಯ ಉತ್ತರ   ದಿಕ್ಕಿಗೆ ಯಾರ  ಜಮೀನು ಬರುತ್ತದೆ ಎಂದರೆ ನೆನೆಪಿಲ್ಲ .

ಸಾಕ್ಷಿಯವರು ಮುಂದುವರಿದು ನಮ್ಮ ಕುಟುಂಬಕ್ಕೆ ಸೇರಿದ ನನ್ನ ತಾಯಿಯವರ ಜಾಗ ಇರುತ್ತದೆ .

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.